


# ವದಂತಿ ಸುಳಿಯಲ್ಲಿ ಫಾಸ್‌ಟ್ಯಾಗ್

ವದಂತಿಗಳಿಗೆ ಕಿವಿಕೊಟ್ಟು ಸೋಷಿಯಲ್ ಮೀಡಿಯಾಗಳಲ್ಲಿ ಕಿಡಿಕಾರಿದ್ದ ಖಾಸಗಿ ವಾಹನ ಮಾಲೀಕರಿಗೆ ಎನ್‌ಎಚ್‌ಎಐ ಸ್ಪಷ್ಟೀಕರಣ ನೀಡಿ, ಅವರ ಆತಂಕ ನಿವಾರಿಸಿದೆ.

■ **ಶಶಿಕುಮಾರ್ ಸಿ.**

ಆಗಸ್ಟ್ 15ರಂದು ಜಾರಿಗೆ ಬಂದಿದ್ದ ವಾರ್ಷಿಕ ಟೋಲ್ ಪಾಸ್‌ಗಳು ಏಳು ಸೀಟಿನ ವಾಹನಗಳಿಗೆ ಅನ್ವಯಿಸುವುದಿಲ್ಲ. ಫಾಸ್‌ಟ್ಯಾಗ್‌ನಲ್ಲೂ ಕೆಲ ಬದಲಾವಣೆಗಳಾಗಿವೆ ಎಂಬ ವದಂತಿಯು ದೇಶದೆಲ್ಲೆಡೆ ಹರಿದಾಡಿತ್ತು. ಇದರ ಬೆನ್ನಲ್ಲೇ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ), 'ಇಂತಹ ಯಾವುದೇ ಬದಲಾವಣೆಗಳು ಆಗಿಲ್ಲ' ಎಂದು ಸ್ಪಷ್ಟನೆ ನೀಡಿದೆ.

ಖಾಸಗಿ ಮತ್ತು ವಾಣಿಜ್ಯೇತರ ವಾಹನಗಳ ಮಾಲೀಕರಿಗೆ ಆಗುತ್ತಿರುವ ಟೋಲ್ ಹೊರೆಯನ್ನು ತಗ್ಗಿಸಲು ಎನ್‌ಎಚ್‌ಎಐ, ವಾರ್ಷಿಕ ಟೋಲ್ ಪಾಸ್‌ಗಳನ್ನು 2025ರ ಸ್ವಾತಂತ್ರ್ಯ ದಿನಾಚರಣೆಯಂದು ಆನ್‌ಲೈನ್ ಮೂಲಕ ಪರಿಚಯಿಸಿತ್ತು. ಇದರನ್ವಯ 3000 ರೂಪಾಯಿ ಪಾವತಿಸಿ ಒಂದು ವರ್ಷದವರೆಗೆ 200 ಬಾರಿ ಟೋಲ್‌ಗಳ ಮೂಲಕ ಹಾದು ಹೋಗಬಹುದಾಗಿತ್ತು. 200 ಟ್ರಿಪ್ ಪೂರ್ಣಗೊಂಡ ಬಳಿಕ ಪಾಸ್‌ಗಳನ್ನು ಮತ್ತೆ 3000 ರೂಪಾಯಿ ಪಾವತಿಸಿ ರಾಜ್‌ಮಾರ್ಗ್ ಆ್ಯಪ್ ಮೂಲಕ ರೀಚಾರ್ಜ್ ಮಾಡಿಕೊಳ್ಳಬಹುದಾಗಿದೆ.

### ದೇಶದೆಲ್ಲೆಡೆ ಹರಡಿದ ವದಂತಿ ಏನು?

ಜನವರಿ 1ರಿಂದ 6–7 ಸೀಟರ್‌ನ ಖಾಸಗಿ ಮತ್ತು ವಾಣಿಜ್ಯೇತರ ವಾಹನಗಳಿಗೆ ವಾರ್ಷಿಕ ಟೋಲ್ ಪಾಸ್ ಅನ್ವಯಿಸುವುದಿಲ್ಲ, 5 ಸೀಟರ್ ಕಾರುಗಳಿಗೆ ಮಾತ್ರ ಇದು ಅನ್ವಯಿಸುತ್ತದೆ. ಫಾಸ್‌ಟ್ಯಾಗ್ 5 ಸೀಟರ್‌ನ ಕಾರುಗಳಿಗೆ ಮಾತ್ರ ಅನ್ವಯಿಸುತ್ತದೆ ಎಂಬ ವದಂತಿ ವೈರಲ್ ಆಗಿತ್ತು. ಇದನ್ನೇ ನಂಬಿಕೊಂಡ ಕೋಟ್ಯಂತರ ಜನರು ಕೇಂದ್ರ ಸರ್ಕಾರದ ವಿರುದ್ಧ ಮುಗಿಬಿದ್ದಿದ್ದರು. ಅಲ್ಲದೆ, ಈಗಾಗಲೇ ತಾವು ಪಾವತಿಸಿರುವ ಹಣ ಹಿಂತಿರುಗಿಸಬೇಕೆಂದು ಆಗ್ರಹಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರ ಎಕ್ಸ್ ಖಾತೆಗಳಿಗೆ ಆಕ್ಷೇಪಿತ ಪೋಸ್ಟ್‌ಗಳನ್ನು ಟ್ಯಾಗ್ ಮಾಡಿದ್ದರು.

ವೈರಲ್ ಆದ ಮಾಹಿತಿಯಲ್ಲಿ 'ಇಂಪಾರ್ಟೆಂಟ್ ನೋಟಿಸ್' ಎಂಬ ಪದಗಳು ದಪ್ಪ ಅಕ್ಷರಗಳಲ್ಲಿವೆ. ವಾರ್ಷಿಕ ಟೋಲ್ ಪಾಸ್‌ನ ಹೊಸ ನಿಯಮ ಜನವರಿ 2026ರಿಂದ ಜಾರಿಗೆ ಬಂದಿದೆ ಎಂದಿದೆ. ಚಿತ್ರದಲ್ಲಿ 7 ಸೀಟರ್ ಕಾರಿನ ಮೇಲೆ ಅಡ್ಡ ಗುರುತು ಮತ್ತು 5 ಆಸನಗಳ ಕಾರಿನ ಮೇಲೆ ಟಿಕ್ ಗುರುತಿದೆ. 7 ಸೀಟರ್ ವಾಹನಗಳಿಗೆ ವಾರ್ಷಿಕ ಟೋಲ್ ಪಾಸ್‌ಗಳು ಇನ್ನು ಮುಂದೆ ಮಾನ್ಯವಾಗಿರುವುದಿಲ್ಲ ಎಂದಿದೆ. ಇಡೀ ಮಾಹಿತಿಯನ್ನು ಅಧಿಕೃತ ಎಂಬಂತೆ ಬಿಂಬಿಸಲಾಗಿದ್ದು, ಇದಕ್ಕೆ ಎನ್‌ಎಚ್‌ಎಐ ಸೇರಿಸಲಾಗಿದೆ. ಈ ಮಾಹಿತಿ ವೈರಲ್ ಆಗುತ್ತಿದ್ದಂತೆ ಸಾಮಾನ್ಯ ವಾಹನ ಚಾಲಕರು ಗೊಂದಲಕ್ಕೀಡಾಗಿದ್ದಾರೆ.



### ಪ್ರಾಧಿಕಾರದ ಸ್ಪಷ್ಟನೆ ಏನು?

'ತಾನಾಗಿರಲಿ ಅಥವಾ ಕೇಂದ್ರ ಸರ್ಕಾರವಾಗಲಿ ವಾರ್ಷಿಕ ಟೋಲ್ ಪಾಸ್ ಮತ್ತು ಫಾಸ್‌ಟ್ಯಾಗ್‌ಗಳಲ್ಲಿ ಯಾವುದೇ ಬದಲಾವಣೆ ತಂದಿಲ್ಲ. ವೈರಲ್ ಆಗಿರುವ ವಿಚಾರವು ಸಂಪೂರ್ಣವಾಗಿ ಸುಳ್ಳು ಮತ್ತು ದಾರಿ ತಪ್ಪಿಸುವ ಉದ್ದೇಶದಿಂದ ಕೂಡಿದೆ. 6–7 ಸೀಟರ್ ಅಥವಾ 5 ಸೀಟರ್ ಖಾಸಗಿ ವಾಹನಗಳ ಫಾಸ್‌ಟ್ಯಾಗ್‌ನ ನಿಯಮಗಳಲ್ಲೂ ಯಾವುದೇ ಬದಲಾವಣೆ ಆಗಿಲ್ಲ. ಇಂತಹ ವದಂತಿಗಳ ಬಗ್ಗೆ ಜನರು ಜಾಗರೂಕರಾಗಿರಬೇಕು' ಎಂದು ಎನ್‌ಎಚ್‌ಎಐ ಈ ಹಿಂದೆಯೂ ಹಲವು ಬಾರಿ ಸ್ಪಷ್ಟಪಡಿಸಿದೆ.

ಈ ರೀತಿಯ ನಕಲಿ ಪೋಸ್ಟ್‌ಗಳು ಜನರನ್ನು ದಿಕ್ಕುತಪ್ಪಿಸುವ ಕೆಲಸ ಮಾಡುತ್ತವೆ. ವಂಚನೆ ಮಾಡುವ ಅಸ್ತ್ರವೂ ಆಗಿದೆ. ಇಂತಹ ಸಂದೇಶಗಳ ಮೂಲಕ ನಕಲಿ ಲಿಂಕ್‌ಗಳನ್ನು ಹಂಚಿಕೊಳ್ಳುವುದು ಕಂಡುಬರುತ್ತಿದೆ. ಆ ಲಿಂಕ್‌ಗಳನ್ನು ಕ್ಲಿಕ್ಕಿಸಿದೊಡನೆ ಜನರ ವೈಯಕ್ತಿಕ ಮಾಹಿತಿ ಕದಿಯುವ ಕೆಲಸವೂ ನಡೆಯುತ್ತದೆ. ಬ್ಯಾಂಕ್ ವಿವರಗಳ ಸೋರಿಕೆಗೂ ಕಾರಣವಾಗಬಹುದು. ಆದ್ದರಿಂದ ಇಂತಹ ವದಂತಿಗಳನ್ನು ನಂಬುವ ಮೊದಲು ಅವುಗಳ ಅಧಿಕೃತತೆ ಬಗ್ಗೆ ಖಾತರಿಪಡಿಸಿಕೊಳ್ಳುವುದು ಅತ್ಯಗತ್ಯ.

5 ಸೀಟರ್ ಅಥವಾ 6–7 ಸೀಟರ್‌ನ ಎಲ್ಲಾ ಖಾಸಗಿ ವಾಹನಗಳಿಗೆ ಫಾಸ್‌ಟ್ಯಾಗ್ ಮತ್ತು ವಾರ್ಷಿಕ ಟೋಲ್ ಪಾಸ್‌ಗಳು ಮಾನ್ಯ. ಟೋಲ್ ಪ್ಲಾಜಾಗಳಲ್ಲಿ ಟೋಲ್ ಶುಲ್ಕಗಳು ವಾಹನದ ವರ್ಗವನ್ನು ಆಧರಿಸಿವೆಯೇ ಹೊರತು ಆಸನಗಳ ಸಂಖ್ಯೆಯನ್ನಲ್ಲ. ಫಾಸ್‌ಟ್ಯಾಗ್‌ಗೆ ಸಂಬಂಧಿಸಿದ ಯಾವುದೇ ಬದಲಾವಣೆಗಳಿದ್ದರೂ ಎನ್‌ಎಚ್‌ಎಐ ಅಧಿಕೃತ ಅಧಿಸೂಚನೆಗಳ ಮೂಲಕ ಘೋಷಿಸುತ್ತದೆ. ■